ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 60 ಟಿಎಂಡಿ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 23.10.2013.

## ಅಧಿಸೂಚನೆ

ಕರ್ನಾಟಕ ಪುರಸಭೆಗಳ ಕಾಯ್ದೆ, 1964(ಕರ್ನಾಟಕ ಆಕ್ಟ್ 22 ಆಫ್ 1964)ರ ಕಲಂ 72(2) ರಡಿ ಸರ್ಕಾರದಿಂದ ನಡೆಸಲಾಗುತ್ತಿರುವ ಶಾಲೆಗಳು/ಕಾಲೇಜುಗಳು/ಹಾಸ್ಟೆಲ್‌ಗಳು/ಆಸ್ಪತ್ರೆಗಳು/ಅಂಗನವಾಡಿಗಳು/ಸಾರ್ವಜನಿಕ ಲೈಬ್ರರಿಗಳು/ಸ್ತ್ರೀ ಸ್ವೀಕಾರ ಕೇಂದ್ರಗಳು **(Destitute Homes)**/ಪೋಲೀಸ್ ಠಾಣೆಗಳು/ಸ್ಮಶಾನಗಳು/ಚಿತಾಗಾರಗಳು/ಡಾಗ್ ಡಿಟೆಕ್ಷನ್ ಸೆಂಟರ್ಸ್ ಮತ್ತು ನೋಂದಾಯಿತ ಸಂಘಗಳಿಂದ/ಧಾರ್ಮಿಕ ಸಂಸ್ಥೆಗಳಿಂದ/ಖಾಸಗಿ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತಿರುವ ಸಾರ್ವಜನಿಕ ಶೌಚಾಲಯಗಳಿಗೆ ನಗರ ಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಿಗೆ ಸೇರಿದ ಸ್ಥಿರಾಸ್ತಿ ಚರಾಸ್ತಿಯನ್ನು ಗುತ್ತಿಗೆ ಆಧಾರದ ಮೇಲೆ ಅಥವಾ ಮಾರಾಟಕ್ಕೆ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಂದ ಹಿಂಪಡೆಯಲಾಗಿದ್ದ ದಿ: 23.08.2012ರ ಅಧಿಸೂಚನೆ ಸಂಖ್ಯೆ: ನಅಇ 72 ಟಿಎಂಡಿ 2011ನ್ನು ಭಾಗಶಃ ಮಾರ್ಪಡಿಸಿ ಕರ್ನಾಟಕ ಮುನಿಸಿಪಲ್ ಕಾಯ್ದೆ 1964ರ ಕಲಂ 388ರ ಉಪ ಕಲಂ 2 ಮತ್ತು 3 ಹಾಗೂ ಕಲಂ 321ರ ಉಪ ಕಲಂ 1 ಮತ್ತು 2ರಲ್ಲಿ ನೀಡಲಾದ ಅಧಿಕಾರದನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಜಿಲ್ಲಾಧಿಕಾರಿಗೆ ಪುನರ್ ಪ್ರತ್ಯಾಯೋಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಟಿ.ಎಂ.ವಾಸುದೇವ ರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
23/10/13

**ಪ್ರತಿ:**

1. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐಡಿ.ಎಫ್.ಸಿ., ಬೆಂಗಳೂರು.
2. ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿಗಳು
4. ಎಲ್ಲಾ ಉಪವಿಭಾಗಧಿಕಾರಿಗಳು ಮತ್ತು ಎಲ್ಲಾ ತಹಶೀಲ್ದಾರರು ಇವರುಗಳಿಗೆ ಜಿಲ್ಲಾಧಿಕಾರಿಗಳ ಮುಖೇನ.
5. ಎಲ್ಲಾ ಪೌರಾಯುಕ್ತರು ಹಾಗೂ ಮುಖ್ಯಾಧಿಕಾರಿಗಳಿಗೆ

(3–5:) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಮುಖಾಂತರ

6. ನಿರ್ದೇಶಕರು, ಯೋಜನೆ ಉಸ್ತುವಾರಿ ಘಟಕ, ನಗರಾಭಿವೃದ್ಧಿ ಇಲಾಖೆ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
8. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
9. ಶಾಖಾ ರಕ್ಷ ಕಡತ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದಲ್ಲಿಯ ನಗರ ಸ್ಥಳೀಯ ಸಂಸ್ಥೆಗಳ ಜಮೀನುಗಳನ್ನು ವಿಲೇವಾರಿ ಮಾಡುವ ಬಗ್ಗೆ ಮಾರ್ಗಸೂಚಿಗಳು.

---

**ಪ್ರಸ್ತಾವನೆ:-**

ಕರ್ನಾಟಕ ಪುರಸಭೆಗಳ ಕಾಯ್ದೆ, 1964ರ ಕಲಂ 72ರಡಿ ನಗರ ಸ್ಥಳೀಯ ಸಂಸ್ಥೆಗಳ ಸ್ವಾಮ್ಯದಲ್ಲಿರುವ ಜಮೀನುಗಳನ್ನು, ನಗರ ಸ್ಥಳೀಯ ಸಂಸ್ಥೆಗಳು ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮಾರಲು/ಗುತ್ತಿಗೆಗೆ ನೀಡಲು/ಹಸ್ತಾಂತರಿಸಲು ಹಕ್ಕನ್ನು ಪಡೆದಿವೆ. ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976ರ ಕಲಂ 176ರಡಿ ನಗರಪಾಲಿಕೆಗಳೂ ಇಂತಹುದೇ ಅಧಿಕಾರವನ್ನು ಹೊಂದಿವೆ. ವ್ಯಕ್ತಿಗಳಿಗೆ:ಸಂಘ ಸಂಸ್ಥೆಗಳಿಗೆ ಜಮೀನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಅನುಮೋದನೆ ಕೋರಿ ನಗರ ಸ್ಥಳೀಯ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಸರ್ಕಾರದಲ್ಲಿ ಸ್ವೀಕರಿಸಲಾಗುತ್ತಿದೆ. ಜಮೀನು ಮಂಜೂರಾತಿಯ ಬಗ್ಗೆ ನಗರ ಸ್ಥಳೀಯ ಸಂಸ್ಥೆಗಳಿಂದ ಬಂದ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲು ಸರ್ಕಾರದ ಹಂತದಲ್ಲಿ ಯಾವುದೇ ನಿರ್ದಿಷ್ಟ ಮಾರ್ಗಸೂಚಿಗಳಿರುವುದಿಲ್ಲ. ವ್ಯಕ್ತಿಗಳಿಗೆ/ಖಾಸಗಿ ಸಂಸ್ಥೆಗಳಿಗೆ/ಇತರೆ ಸಂಘ ಸಂಸ್ಥೆಗಳಿಗೆ ಉಪನೋಂದಣಾಧಿಕಾರಿಯವರ ಮಾರಾಟದ ಅಂಕಿ ಅಂಶಗಳ ಆಧಾರದ ಮೇಲೆ ಮತ್ತು ಕೆಲವು ಪ್ರಕರಣಗಳಲ್ಲಿ ರಿಯಾಯಿತಿ ದರದಲ್ಲಿ/ಕನಿಷ್ಠ ದರದಲ್ಲಿ ಜಮೀನು ಮಂಜೂರಾತಿ ಮಾಡುವ ಬಗ್ಗೆ ಈವರೆಗೆ ಸರ್ಕಾರವು ಪರಿಗಣಿಸುತ್ತಿದೆ. ವಿವೇಚನಾರಹಿತ ಆಸ್ತಿ ಮಂಜೂರಾತಿಯಿಂದಾಗುವ ಆದಾಯ ನಷ್ಟವನ್ನು ಭರಿಸಲು ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸದೃಢವಾಗಿರುವುದಿಲ್ಲ. ನಗರ ಪ್ರದೇಶದ ಆಸ್ತಿಗಳ ಬೆಲೆಯು ಗಣನೀಯವಾಗಿ ಹೆಚ್ಚಿರುವ ಹಿನ್ನಲೆಯಲ್ಲಿ, ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಜಮೀನುಗಳಿಗೆ ಗರಿಷ್ಠ ಬೆಲೆಯನ್ನು ಪಡೆಯುವ ಸಲುವಾಗಿ ಜಮೀನು ವಿಲೇವಾರಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ರೂಪಿಸುವ ಅವಶ್ಯಕತೆಯನ್ನು ಮನಗಂಡು ಸರ್ಕಾರವು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂ:ನಅಇ 129 ಟಿಎಂಡಿ 2002, ಬೆಂಗಳೂರು, ದಿನಾಂಕ:02.6.2003.**

ರಾಜ್ಯದ ಮಹಾನಗರ ಪಾಲಿಕೆಗಳು/ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿ ಮತ್ತು ಅಧಿಸೂಚಿತ ಪ್ರದೇಶಗಳಿಗೆ ಸೇರಿದ ಜಮೀನುಗಳನ್ನು ವಿಲೇವಾರಿ ಮಾಡುವ ಸಂದರ್ಭಗಳಲ್ಲಿ, ಈ ಕೆಳಕಂಡ ಮಾರ್ಗಸೂಚಿಗಳಿಗೆ ಅನುಗುಣವಾಗಿ ಮಾತ್ರವೇ ಪ್ರಕರಣಗಳನ್ನು ಇತ್ಯರ್ಥಪಡಿಸುವಂತೆ ಆದೇಶಿಸಿದೆ: